**Publication:** Vijayakarnataka
**Date:** 29/07/2016
**Edition:** Bengaluru
**Page No:** 2
**Headline:** TCS IT WIZ

# ಟಿಸಿಎಸ್ ಐಟಿ ವಿಜ್ ಸ್ಪರ್ಧೆ

**ಬೆಂಗಳೂರು:** ಪ್ರತಿಷ್ಠಿತ ಐಟಿ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಐಟಿ ವಿಜ್ 2016 ಎಂಬ ಕ್ವಿಜ್ ಆಯೋಜಿಸಿದೆ. ಇದು ದೇಶದ ಅತಿ ದೊಡ್ಡ ಐಟಿ ಕ್ವಿಜ್ ಆಗಿದೆ. ನಗರದ ವೈಯಾಲಿಕಾವಲ್‌ನಲ್ಲಿರುವ ಚೌಡಯ್ಯ ಮೆಮೋರಿಯಲ್ ಸಭಾಂಗಣದಲ್ಲಿ ಆ.4ರಂದು ನಡೆಯಲಿದೆ.ಟಿಸಿಎಸ್ ವಿಜ್ ಸ್ಪರ್ಧೆ ದಿಲ್ಲಿ, ಹೈದರಾಬಾದ್, ಕೋಲ್ಕೊತ್ತಾ ಸೇರಿ ದೇಶದ 15 ನಗರಗಳಲ್ಲಿ ನಡೆಯುತ್ತಿದೆ. ಪ್ರವೇಶ ಶುಲ್ಕ ಇರುವುದಿಲ್ಲ. 8ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳು ಪಾಲ್ಗೊಳ್ಳಬಹುದು. ಪ್ರತಿ ಶಿಕ್ಷಣ ಸಂಸ್ಥೆಗಳು ಇಬ್ಬರು ವಿದ್ಯಾರ್ಥಿಗಳನ್ನೊಳಗೊಂಡ 10 ತಂಡಗಳನ್ನು ಕಳುಹಿಸಬಹುದು. ಶಿಕ್ಷಣ ಸಂಸ್ಥೆಗಳು ಪ್ರವೇಶ ಅರ್ಜಿಯನ್ನು ಜು.29ರೊಳಗೆ ಕಳುಹಿಸಬೇಕು. ವೆಬ್‌ಸೈಟ್‌ನಲ್ಲಿಯೂ ಹೆಸರು ನೋಂದಾಯಿಸಬಹುದು.ಪ್ರಾಥಮಿಕ ಸುತ್ತಿನಲ್ಲಿ ಅತ್ಯಧಿಕ ಅಂಕ ಪಡೆದ ಆರು ತಂಡಗಳು ಪ್ರಾದೇಶಿಕ ಹಂತದ ಫೈನಲ್ ಪ್ರವೇಶಿಸುತ್ತವೆ. ಪ್ರಾದೇಶಿಕ ಸ್ಪರ್ಧೆಯಲ್ಲಿ ವಿಜೇತರಾಗುವ ತಂಡ ಮುಂಬಯಿನಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ಮೆಗಾ ಫೈನಲ್‌ನಲ್ಲಿ ಸ್ಪರ್ಧಿಸಲಿದೆ. ಈ ಸುತ್ತಿಗೆ ಆಯ್ಕೆಯಾದ ತಂಡಕ್ಕೆ ಮುಂಬಯಿಗೆ ಕರೆದೊಯ್ಯುವ ವ್ಯವಸ್ಥೆಯನ್ನು ಟಿಸಿಎಸ್ ಸಂಸ್ಥೆ ಮಾಡಲಿದೆ.ಪ್ರಾದೇಶಿಕ ಹಂತದಲ್ಲಿ ವಿಜೇತರಾಗುವ ತಂಡದ ಸದಸ್ಯರಿಗೆ ಐ ಪಾಡ್ ಬಹುಮಾನವಾಗಿ ಸಿಗಲಿದೆ. ರನ್ನರ್ ಅಪ್ ತಂಡಕ್ಕೆ ಐಪಾಡ್ ಮಿನಿ ಸಿಗಲಿದೆ. ಇದರ ಜತೆಗೆ ವಿಶೇಷವಾಗಿ ವಿನ್ಯಾಸಗೊಳಿಸಿದ ಟ್ರೋಫಿ ಮತ್ತು ಪದಕವನ್ನು ಬಹುಮಾನವಾಗಿ ವಿತರಿಸಲಾಗುವುದು ಎಂದು ಸಂಸ್ಥೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ : www.tcsitwiz.com